# ಸಂಪಾದಕೀಯ

## ಭಾರತದ ಜನಜೀವನ

ಒಂದು ರಾಷ್ಟ್ರ ಅಥವಾ ದೇಶದ ಜೀವಾಳವನ್ನು ತಿಳಿಯಬೇಕಾದರೆ, ಆ ದೇಶದ, ಪ್ರಾಂತದ ಇತಿಹಾಸವನ್ನೂ ಸಂಸ್ಕೃತಿಯನ್ನೂ ರೂಪಿಸುತ್ತಿರುವ ಆಂತರಿಕ ಹಾಗೂ ಬಾಹ್ಯ ಅಂಶಗಳೆಲ್ಲವನ್ನೂ ಸೂಕ್ಷ್ಮವಾಗಿ ಪರಿಶೀಲಿಸಬೇಕಾಗುವುದು. ಪ್ರತಿಯೊಂದು ರಾಷ್ಟ್ರಕ್ಕೂ ತನ್ನದೇ ಆದ ಜೀವಸ್ರೋತವಿದೆ ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ. ಆಯಾ ದೇಶದ ಪ್ರಗತಿಯು ಆ ಮೂಲಸ್ರೋತವನ್ನೇ ಆಧರಿಸಿರುತ್ತದೆ. ಹೊಸ ವಿಚಾರಗಳು, ತಂತ್ರಜ್ಞಾನ ಮಾಹಿತಿಯನ್ನೆಲ್ಲ ಅಳವಡಿಸಿಕೊಂಡರೂ ಯಾವ ಸಮಾಜವೂ ತನ್ನತನವನ್ನು ಕಳೆದುಕೊಳ್ಳಲು ಬಯಸುವುದಿಲ್ಲ. ಸಾಮಾಜಿಕ ರಚನೆಯ ಏರುಪೇರುಗಳಿಗೆಲ್ಲ ಈ ಜೀವಾಳದ ಉಪೇಕ್ಷೆಯೇ ಕಾರಣ ಎಂಬುದನ್ನು ಇತಿಹಾಸದುದ್ದಕ್ಕೂ ನಾವು ಕಾಣಬಹುದು ಎಂದು ಸ್ವಾಮಿಜಿ ಅಭಿಪ್ರಾಯ ಪಡುತ್ತಾರೆ. ಭಾರತದ ಜೀವಾಳವು ಧರ್ಮ, ಆಧ್ಯಾತ್ಮಿಕತೆ ಎಂದು ಸ್ವಾಮಿಜಿ ಸ್ಪಷ್ಟವಾಗಿ ತಿಳಿಸುತ್ತಾರೆ. ಭಾರತದ ಬಗ್ಗೆ ಅಪಾರವಾದ ಒಲವಿದ್ದ ಅವರು ಪರಿವ್ರಾಜಕರಾಗಿ ಎಲ್ಲೆಡೆ ಸುತ್ತಾಡಿದ್ದು, ಈ ದೇಶದ ತುಡಿತವನ್ನು ತಿಳಿಯಲೋಸುಗ. ರಾಜಕೀಯ ಬದಲಾವಣೆ, ದೇಶ-ವಿದೇಶಗಳ ನಡುವಣ ಸಂಬಂಧಗಳ ಬಗ್ಗೆ ಭಾರತೀಯ ಜನಸಾಮಾನ್ಯರು ಆಸಕ್ತಿ ವ್ಯಕ್ತಪಡಿಸದೇ ಇರಬಹುದು. ಆದರೆ ಧಾರ್ಮಿಕ ಕ್ರಿಯೆಗಳಲ್ಲಿ, ಸಭೆಗಳಲ್ಲಿ, ಕುಂಭಮೇಳಗಳಲ್ಲಿ ಕಂಡುಬರುವ ಇವರ ಉತ್ಸಾಹ ಮತ್ತಾವ ರಾಷ್ಟ್ರದಲ್ಲೂ ಕಂಡುಬರುವುದಿಲ್ಲ.

> **ಪ್ರತಿಯೊಂದು ದೇಶವೂ ತನ್ನ ಸನ್ನಿವೇಶ, ಸಂದರ್ಭಗಳು ಹಾಗೂ ಸ್ವಭಾವಕ್ಕೆ ಅನುಗುಣವಾದ ರಾಜಕೀಯ ಮತವನ್ನು ಅನುಸರಿಸಬೇಕು. ಯಾವುದು ರಾಷ್ಟ್ರೀಯ ಸ್ವಾತಂತ್ರ್ಯ ಹಾಗೂ ರಾಷ್ಟ್ರೀಯ ಆತ್ಮಸಾಕ್ಷಾತ್ಕಾರಕ್ಕೆ ನಿಶ್ಚಿತವಾದ ಮತ್ತು ಪರಿಪೂರ್ಣವಾದ ಮಾರ್ಗವೋ ಅದುವೇ ಅತ್ಯುತ್ತಮವಾದದ್ದು.**
>
> **—ಶ್ರೀಅರವಿಂದರು**

ಭಾರತದ ಆತ್ಮವನ್ನು ಗುರುತಿಸುವ ಪ್ರಯತ್ನವನ್ನು ಪ್ರಪ್ರಥಮವಾಗಿ ಮಾಡಿದವರು ಸ್ವಾಮಿ ವಿವೇಕಾನಂದರು. ಹಲವಾರು ಸಣ್ಣ ಸಣ್ಣ ರಾಜ್ಯಗಳಾಗಿ ವಿಭಜನೆಗೊಂಡು ಅಸ್ತಿತ್ವವೇ ಇಲ್ಲದಂತಿದ್ದ ಭಾರತವು, ರಾಜ–ಮಹಾರಾಜರುಗಳ ಕಲಹಗಳಲ್ಲಿ, ಆಡಂಬರದ ಬದುಕು–ವಿಲಾಸಗಳ ವಿಡಂಬನೆಯಲ್ಲಿ ಮುಳುಗಿಹೋಗಿತ್ತು. ಆಂಗ್ಲರ ದಾಸರಾಗಿರುವುದೇ ಶ್ರೇಯಸ್ಕರವೆಂದು ನಂಬಿ ಅಲ್ಪತೃಪ್ತರಾಗಿದ್ದ ಭಾರತೀಯರ ತಮೋನಿದ್ರೆಯನ್ನು ಹೋಗಲಾಡಿಸಿದ ಸ್ವಾಮಿಜಿ, ನಶಿಸಿಹೋಗಿದ್ದ ರಾಷ್ಟ್ರಪ್ರಜ್ಞೆಯನ್ನು ಜಾಗೃತಗೊಳಿಸಿದರು. ದೇಶದೆಲ್ಲೆಡೆ ಬಿರುಗಾಳಿಯಂತೆ ಸಂಚರಿಸುತ್ತ ಬತ್ತಿಹೋಗಿದ್ದ ಜೀವಗಳಲ್ಲಿ ಸ್ವಾತಂತ್ರ್ಯದ, ದೇಶಪ್ರೇಮದ ಜ್ವಾಲೆಯನ್ನು ಪ್ರೋತ್ತಿಸಿದರು. ಈ ದೇಶದ ಜೀವಾಳವು ಧರ್ಮವೆಂದು ಹೇಳುತ್ತ ಎಲ್ಲ ಸುಧಾರಣೆಗಳೂ ಧರ್ಮದ ಮೂಲಕ ಆಗಬೇಕು ಎಂದು ತಿಳಿಸಿದರು. ಎಲ್ಲ ಸಾಮಾಜಿಕ ಬದಲಾವಣೆಗಳೂ ಧರ್ಮದ ಮೂಲಕ ಪ್ರಯೋಗಗೊಂಡಾಗ ಸಹಜವಾಗಿ, ಸುಸೂತ್ರವಾಗಿ ದೇಶದ ಉದ್ಧಾರ ಸಾಧ್ಯವಾಗುವುದು ಎಂಬುದು ಅವರ ದೃಢ ವಿಶ್ವಾಸವಾಗಿತ್ತು. "ಈ ಜನಾಂಗದ ಜೀವನವೇ ಧರ್ಮ, ಇದರ ಭಾಷೆ ಧರ್ಮ, ಇದರ ಭಾವನೆ ಧರ್ಮ. ನಿಮ್ಮ ರಾಜಕೀಯ, ಸಾಮಾಜಿಕ ವ್ಯವಸ್ಥೆ, ಮುನಿಸಿಪಾಲಿಟಿ, ಪ್ಲೇಗನ್ನು ತಡೆಗಟ್ಟುವ ಕೆಲಸ, ಬರಗಾಲ ಪರಿಹಾರ ಮುಂತಾದ ಕಾರ್ಯಗಳೆಲ್ಲ ಒಂದು ನಂತೆಯೇ ಧರ್ಮದ ಮೂಲಕ ಆಗುವುದು. ಇಲ್ಲದೇ ಇದ್ದರೆ ನಿಮ್ಮ ಕಿರುಚಾಟ ಕೂಗಾಟಗಳೆಲ್ಲ ಬರೀ ವ್ಯರ್ಥ, ನನ್ನ ಸೋದರರೆ," ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ (ಬೋಧನೆಯ ಸಾರ, ಪು.೧೧೦).

ಭಾರತದ ಇತಿಹಾಸವು, ಈ ಜನಾಂಗದ ಸಂಸ್ಕೃತಿಯು ಅತ್ಯಂತ ಪ್ರಾಚೀನವಾದದ್ದೆಂದು ಈಗ ಎಲ್ಲರೂ ಒಪ್ಪುತ್ತಾರೆ. ಪಾಶ್ಚಾತ್ಯ ಸಂಶೋಧಕರು ಅನೇಕ ವಿಧಗಳಲ್ಲಿ ಈ ಸತ್ಯಾಂಶವನ್ನು ವಿಕೃತಗೊಳಿಸಿದ್ದರೆಂಬುದು ಭಾರತೀಯ ಪುರಾತತ್ತ್ವ ಇಲಾಖೆಯ ಅನೇಕ ಸಂಶೋಧನೆಗಳಿಂದ ತಿಳಿದುಬಂದಿದೆ. ಈ ಜನಾಂಗದ ಸಂಸ್ಕೃತಿಯು ಎರವಲು ಪಡೆದುಕೊಂಡಿದ್ದು ಎಂದು ತೋರಿಸುವುದರ ಮೂಲಕ ತಮ್ಮ ಸಂಸ್ಕೃತಿಯೇ ಉತ್ತಮ ಎಂದು ಸಾಬೀತು ಪಡಿಸುವುದೇ ಪಾಶ್ಚಾತ್ಯರ ಉದ್ದೇಶವಾಗಿತ್ತು. ಆರ್ಯ ಜನಾಂಗದವರು ಮೂಲನಿವಾಸಿಗಳಾಗಿದ್ದ ದ್ರಾವಿಡರನ್ನು ಯುದ್ಧಗಳಲ್ಲಿ ಸದೆಬಡಿದು ತಮ್ಮ ಉತ್ತಮ ಸಂಸ್ಕೃತಿಯನ್ನು ನೆಲೆನಿಲ್ಲಿಸಿದರು ಎಂದು ಪಠ್ಯ ಪುಸ್ತಕಗಳಲ್ಲಿ ತಿಳಿಸುತ್ತ ಅಂತಃಕಲಹ ಹಾಗೂ ವಿಭಜನೆಯ ಬೀಜವನ್ನು ಬಿತ್ತಿದರು. ವೇದಗಳ ಜ್ಞಾನ ಹಾಗೂ ಯಜ್ಞಯಾಗಗಳ ಉತ್ತಮ ಕಾಲಕ್ಕಿಂತಲೂ ಹಿಂದೆಯೇ ಭಾರತೀಯ ಸಂಸ್ಕೃತಿ ರೂಪುಗೊಂಡಿತ್ತು ಎಂಬುದನ್ನು ಸಂಶೋಧನೆಗಳ ಮೂಲಕ ಕಂಡುಕೊಳ್ಳಲಾಗಿದೆ. ಪಾಶ್ಚಾತ್ಯರ ಅಭಿಮತದಂತೆ

ವೇದಗಳ ಕಾಲ ಕ್ರಿಸ್ತಪೂರ್ವ ನಾಲ್ಕುಸಾವಿರ ವರ್ಷಗಳು. ಭಾರತೀಯ ಇತಿಹಾಸಜ್ಞರ ಪ್ರಕಾರ ಇದಕ್ಕಿಂತಲೂ ಸಾವಿರಾರು ವರ್ಷಗಳ ಪೂರ್ವದಲ್ಲಿಯೇ ಉತ್ತಮ ಸಾಮಾಜಿಕ ವ್ಯವಸ್ಥೆಯ ಕುರುಹುಳ್ಳ ನಗರಗಳಿದ್ದವು ಎಂಬುದು ಅವುಗಳ ಅವಶೇಷಗಳ ಮೂಲಕ ತಿಳಿದುಬಂದಿದೆ. ಆರ್ಯ ಸಂಸ್ಕೃತಿಯು ಭಾರತದಲ್ಲೇ ಹುಟ್ಟಿ ಬೆಳೆದು, ಇತರ ಜನಾಂಗಗಳ ಮೇಲೆ ವಿದ್ವತ್ತು ಹಾಗೂ ಧಾರ್ಮಿಕ ಚಿಂತನೆಗಳ ಮೂಲಕ ಪ್ರಭಾವ ಬೀರಿತ್ತು ಎಂಬುದೂ ಕೂಡ ತಿಳಿದುಬಂದಿದೆ.

ಇತರ ಸಂಸ್ಕೃತಿ ಹಾಗೂ ಜನಾಂಗಗಳಿಗೆ ಹೋಲಿಸಿದಾಗ ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯವೊಂದು ಎದ್ದುಕಾಣುತ್ತದೆ. ಅದೇ ಸತ್ಯದ ಅನ್ವೇಷಣೆ. ವೇದಗಳಲ್ಲಿ ಬರುವ ಅನೇಕ ಉದಾತ್ತ ವಿಚಾರಗಳನ್ನು, ಸತ್ಯದ ಹೊಳಹುಗಳನ್ನು ಕಂಡವರು ಸತ್ಯದ ಅನ್ವೇಷಕರಾದ ಋಷಿಗಳು. ಇವರು ಬಾಹ್ಯ ಜಗತ್ತಿನಲ್ಲಿ ನಡೆಸುವ ಸಂಶೋಧನೆಗಳಂತೆ ಮಾನವನ ಅಂತರಂಗದ ಆಯಾಮಗಳ ಸಂಶೋಧನೆಯನ್ನು ಸಾಧಿಸಿದವರು. **ಕಶ್ಚಿದ್ಧೀರಃ ಪ್ರತ್ಯಗಾತ್ಮಾನಮ್ ಐಕ್ಷತ್ ಆವೃತ್ತಚಕ್ಷುಃ, ಅಮೃತತ್ವಮ್ ಇಚ್ಛನ್**—"ಎಲ್ಲೋ ಒಬ್ಬ ಧೀರನು (ಬುದ್ಧಿವಂತನು) ಅಮೃತತ್ವವನ್ನು (ಶಾಶ್ವತವಾದುದನ್ನು) ಬಯಸುತ್ತ ಕಣ್ಣು ಮುಂತಾದ ಇಂದ್ರಿಯಗಳನ್ನು ಹೊರಗಿನ ಪ್ರಪಂಚದಿಂದ ವಿಮುಖಗೊಳಿಸಿ ಅಂತರಾತ್ಮನನ್ನು (ಮಾನವನ ಒಳಗಿರುವ ಸತ್ಯವನ್ನು, ಮಾನವನ ಅಂತರಂಗದಲ್ಲಿ ಹುದುಗಿರುವ ದಿವ್ಯತೆಯನ್ನು) ಕಂಡುಕೊಂಡನು", ಎಂದು ಕಠೋಪನಿಷತ್ತಿನ ಮಂತ್ರವು ಹೇಳುತ್ತದೆ (೪.೧; ೧).

ತಮ್ಮ ಪ್ರಖರವೂ ಸೂಕ್ಷ್ಮವೂ ಆದ ಬುದ್ಧಿಶಕ್ತಿಯಿಂದ ಮಾನವನ ಬಾಹ್ಯ ಹಾಗೂ ಆಂತರಿಕ ಕ್ರಿಯೆಗಳನ್ನು ಕೂಲಂಕಷವಾಗಿ ವಿಶ್ಲೇಷಿಸಿ ಬದಲಾವಣೆಯನ್ನು ಹೊಂದದ, ವಿಭಜಿಸಲಾಗದ ನಿತ್ಯಸತ್ಯವನ್ನು ವೇದದ ಋಷಿಗಳು ತಮ್ಮಲ್ಲಿಯೇ ಕಂಡುಕೊಂಡರು. ತಾವು ಕಂಡುಕೊಂಡ ಸತ್ಯವನ್ನು ನಿರ್ಭಯವಾಣಿಯಿಂದ ಸಾರಿದರು. **ವೇದಾಹಮೇತಂ ಪುರುಷಂ ಮಹಾನ್ತಮ್, ಆದಿತ್ಯವರ್ಣಂ ತಮಸಃ ಪರಸ್ತಾತ್**—"ಅವಿದ್ಯಾರೂಪದ ಅಂಧಕಾರಕ್ಕೆ ಅತೀತವಾಗಿರುವ, ಸೂರ್ಯನಂತೆ ಸ್ವಯಂಪ್ರಕಾಶವುಳ್ಳ ಈ ಮಹಾನ್ ಪುರುಷನನ್ನು ನಾನು ತಿಳಿದಿದ್ದೇನೆ." ಶ್ವೇತಾಶ್ವತರ ಉಪನಿಷತ್ತಿನಲ್ಲಿ (೩.೮) ಬರುವ ಈ ವಾಕ್ಯಗಳು ಭಾರತೀಯ ಜನಸಾಮಾನ್ಯರ ಮೇಲೆ ಬಹುಕಾಲದಿಂದ ಅಗೋಚರ ಪ್ರಭಾವ ಬೀರಿವೆ. ಅಲ್ಪ ವಸ್ತುಗಳಿದ್ದರೂ ತೃಪ್ತಿಯಿಂದ ಜೀವಿಸಬಲ್ಲ ಕಲೆಯನ್ನು ಭಾರತೀಯನು ಈ ಉದಾತ್ತ ವಿಚಾರಗಳ ಆಧಾರದ ಮೇಲೆಯೇ ಗಳಿಸಿರಬೇಕು.

ಬಹಳ ಹಿಂದಿನಿಂದಲೂ ದಿನನಿತ್ಯವೂ ಕಂಡುಬರುವ ಜಗತ್ತನ್ನು ನಿರಾಕರಿಸುವ ಹಾಗೂ ಇದರ ಹಿನ್ನೆಲೆಯಲ್ಲಿರುವ ಅಗೋಚರ ಸತ್ಯದ ಅನ್ವೇಷಣೆಯ ತಾತ್ವಿಕ ನಿಲುವು ಭಾರತದಲ್ಲಿ ಇದ್ದಿತಾದರೂ ಜೊತೆಜೊತೆಗೆ ಈ ಜೀವನವೇ ಸರ್ವಸ್ವ, ಸಾಲಮಾಡಿಯಾದರೂ ಸುಖವನ್ನು ಅನುಭವಿಸಬೇಕು ಎಂಬ ನಿರ್ಧಾರವನ್ನು ತಾಳಿದ್ದ ಚಾರ್ವಾಕರೂ ಇದ್ದರು. ಅನ್ವೇಷಣೆಯು ನಿರಂತರವಾಗಿ ಸಾಗುತ್ತಿತ್ತು. ಹೊಸ ಹೊಸ ವಿಚಾರಗಳು ಹೊರಹೊಮ್ಮುತ್ತಿದ್ದವು. ಸಾಂಖ್ಯರು, ನೈಯಾಯಿಕರು, ಬೌದ್ಧರು, ಕಣಾದರು—ಇವರೆಲ್ಲರ ತಾತ್ತ್ವಿಕ ನಿಲುವುಗಳು ಬೇರೆಬೇರೆಯಾಗಿದ್ದವು. ಚರ್ಚೆ, ವಿವಾದಗಳು ಸಾಮಾನ್ಯವಾಗಿದ್ದರೂ, ವಿಚಾರಗಳನ್ನು ಮಂಡಿಸುವುದರಲ್ಲಿ ಪೈಪೋಟಿ ಕಂಡುಬಂದರೂ, ಹಿಂಸೆ ಅಥವಾ ಯುದ್ಧದ ಮೂಲಕ ಧ್ವಂಸಗೈಯುವ ಪ್ರಕ್ರಿಯೆ ವಿರಳವೇ ಎಂದೆನ್ನಬಹುದು. ಬುದ್ಧ, ಮಹಾವೀರರ ಅಹಿಂಸಾತತ್ತ್ವ ಪ್ರಬಲವಾಗಿ ಪ್ರಭಾವ ಬೀರಿದ ಕಾರಣ, ಪ್ರತಿಭಟಿಸುವುದೂ ಹಿಂಸೆ ಎಂಬ ಭಾವನೆ ನೆಲೆಗೊಂಡಿತು. ಮಡದಿ ಮಕ್ಕಳ ಜೀವ ಹೋಗುತ್ತಿದ್ದರೂ, ರಾಷ್ಟ್ರದ ಸಂಪತ್ತನ್ನೆಲ್ಲ ಶತ್ರುಗಳು ದೋಚುತ್ತಿದ್ದರೂ ಪ್ರತಿಯಾಗಿ ಹಿಂಸೆ ಮಾಡಬಾರದು—ಎಂಬ ಅಹಿಂಸೆಯ ಸೋಗು ಹಾಕಿ ಕೊಂಡ ತಮಸ್ಸು, ಸೋಮಾರಿತನ ಹಾಗೂ ನಿರ್ವೀರ್ಯತೆ ಭಾರತೀಯರನ್ನು ಆಳುತ್ತಿದ್ದುವು.

ಇದರೊಂದಿಗೆ ಮತ್ತೊಂದು ವಿಚಾರವೂ ಭಾರತೀಯರ ಜೀವನ ಶೈಲಿಯನ್ನು ರೂಪಿಸುತ್ತಿರುವುದನ್ನು ಕಾಣುತ್ತೇವೆ. ಅದೇ ಕರ್ಮಸಿದ್ಧಾಂತ. ಈಗಿನ ಎಲ್ಲ ಕಷ್ಟ, ಅನಿಷ್ಟಗಳಿಗೂ ನಾವು ಹಿಂದೆ ಮಾಡಿರುವ ಕ್ರಿಯೆಗಳೇ ಕಾರಣವೆಂಬ ಈ ಸಿದ್ಧಾಂತದ ಪ್ರಭಾವದಿಂದ ಎಲ್ಲವನ್ನೂ ಅನಿವಾರ್ಯವೆಂದು ಸ್ವೀಕರಿಸುವ ಮನೋಭಾವನೆ ಭಾರತೀಯರಲ್ಲಿದೆ. ಇದು ಅಸಾಮಾನ್ಯ ತಾಳ್ಮೆಯನ್ನು ಜನಮಾನಸಕ್ಕೆ ನೀಡಿದೆಯಾದರೂ, ಬದಲಾವಣೆಯನ್ನು ಬಯಸುವ, ಉತ್ತಮಿಕೆಯನ್ನು ಸಾಧಿಸುವ ಛಲವಿಲ್ಲದ ನಿರಾಶಾದಾಯಕ ಮನೋಭಾವನೆಯನ್ನೂ ರೂಢಿಸಿದೆ. ಜವಾಬ್ದಾರಿಯುತ ಜೀವನಪದ್ಧತಿಯು ಕಂಡುಬರುವುದಿಲ್ಲ. ಎಲ್ಲಕ್ಕೂ ಇತರರನ್ನು ದೂಷಿಸುವ, ದೈವವನ್ನು ಹಳಿಯುವ, ರಾಶಿನಕ್ಷತ್ರಗಳನ್ನೋ, ವಿಧಿಯನ್ನೋ ಮೊರೆಹೊಗುವ ದುರ್ಬಲತೆಯು ಸರ್ವೇಸಾಮಾನ್ಯ. ಈ ಪಿಡುಗುಗಳನ್ನು ಹೋಗಲಾಡಿಸಲೋಸುಗ ಸ್ವಾಮಿ ವಿವೇಕಾನಂದರು ಮತ್ತೆ ಮತ್ತೆ ಹೇಳುತ್ತಿದ್ದ ವಾಕ್ಯಗಳನ್ನು ನಮ್ಮ ದೇಶಬಾಂಧವರು ಸ್ಮರಿಸಬೇಕು: "ನಮಗಿಂದು ಬೇಕಾಗಿರುವುದು ಗೀತೆಯನ್ನು ಮೊಳಗುತ್ತಿರುವ ಶ್ರೀಕೃಷ್ಣನ ಆರಾಧನೆ, ಕೋದಂಡ ಬಾಣಗಳನ್ನು ಧರಿಸಿರುವ ಶ್ರೀರಾಮನ ಆರಾಧನೆ, ಮಹಾವೀರನ ಆರಾಧನೆ, ಮಹಾಕಾಳಿಯ ಆರಾಧನೆ. ಪ್ರಚಂಡ ಸ್ಫೂರ್ತಿ ಮತ್ತು ಇಚ್ಛೆಗಳಿಂದ ಕೆಲಸ ಮಾಡಿದರೆ ಜನ ಬಲಾಢ್ಯರಾಗುವರು. ನಾನು ಪರಿಸ್ಥಿತಿಯನ್ನು ಕೂಲಂಕಷವಾಗಿ

ವಿಚಾರಿಸಿ ಈ ನಿರ್ಣಯಕ್ಕೆ ಬಂದಿರುವೆನು. ನಮ್ಮ ದೇಶದಲ್ಲಿ ಈಗ ಧರ್ಮದ ವಿಷಯವಾಗಿ ಮಾತನಾಡುತ್ತಿರುವವರಲ್ಲಿ ಮುಕ್ಕಾಲುಪಾಲು ಜನ ತಮೋಗುಣಿಗಳು, ಮೆದುಳು ಕೆಟ್ಟವರು ಅಥವಾ ಸ್ವಮತಭ್ರಾಂತರು. ನೀವು ಸಾಕಾದಷ್ಟು ರಜೋಗುಣಿಗಳಾಗದಿದ್ದರೆ ನಿಮಗೆ ಇಹಪರಗಳೆರಡರಲ್ಲಿಯೂ ಭರವಸೆ ಮೂಡುವುದಿಲ್ಲ. ಭರತಖಂಡವೆಲ್ಲಾ ಘೋರ ತಮದಿಂದ ಆವೃತವಾಗಿದೆ. ಸ್ವಾಭಾವಿಕವಾಗಿ ಇದರ ಪರಿಣಾಮವೆ ಇಹದಲ್ಲಿ ಗುಲಾಮಗಿರಿ, ಪರದಲ್ಲಿ ನರಕವಾಸ" (ಬೋಧನೆಯ ಸಾರ ಪು.೧೧೩).

**ಒಂದು ಕಾಲಕ್ಕೆ ಜಗತ್ತಿನಲ್ಲೇ ಅತ್ಯಂತ ಸ್ವೋಪಜ್ಞವೂ, ಭೂಮವೂ ಆಗಿದ್ದ ಭಾರತೀಯ ಬೌದ್ಧಿಕ ಶಕ್ತಿಯು ದಾರಿದ್ರ್ಯಕ್ಕೆ ಒಳಗಾಗಿರುವುದಕ್ಕೆ ಕಾರಣವೆಂದರೆ ಹಿಂದೂಧರ್ಮದ ಬಾಹ್ಯ ರೂಪಗಳಿಗೆ ನಾವು ಸಂಪೂರ್ಣ ದಾಸರಾಗಿರುವುದು. ಹೀಗಾಗಿ ನಮ್ಮ ಇತ್ತೀಚಿನ ಉತ್ತಮ ಮಟ್ಟದ ಕ್ರಿಯಾಶೀಲತೆಯನ್ನೂ ಒಂದು ತೆರನಾದ ಅಸಾಮರ್ಥ್ಯ, ನಿರ್ವೀರ್ಯತೆ, ಕ್ಲೈಬ್ಯಗಳು ಆವರಿಸಿವೆ.**

—ಶ್ರೀಅರವಿಂದರು

ಭಾರತದ ದೊಡ್ಡ ಸಮಸ್ಯೆಯಿರುವುದು ಧರ್ಮವನ್ನು ಅನುಷ್ಠಾನಕ್ಕೆ ತರದೇ ಇರುವುದರಲ್ಲಿ. ಧರ್ಮವನ್ನು ಕೇವಲ ಗುಡಿಗಳಿಗೆ, ಪೂಜೆಪುನಸ್ಕಾರಗಳಿಗೆ ಮೀಸಲಿಟ್ಟು, ವ್ಯವಹಾರದಲ್ಲಿ ಸುಳ್ಳು, ಅನೀತಿಗಳಿಗೆ ಇಳಿಯುವ ನಡತೆ ಯೋಗ್ಯವೇ ಎಂದು ಪ್ರಶ್ನಿಸಬೇಕಾಗಿದೆ. ಉದಾತ್ತ ವಿಚಾರಗಳನ್ನು ಸಾರುವ ಗ್ರಂಥಗಳು ಹಾಗೂ ಅವುಗಳನ್ನು ಅನೇಕ ರೀತಿಯಲ್ಲಿ ವ್ಯಾಖ್ಯಾನ ಮಾಡುವ ಉಪನ್ಯಾಸಗಳು ಪ್ರತಿನಿತ್ಯ ಸಾವಿರಾರು ಮಂದಿಯನ್ನು ಆಕರ್ಷಿಸುತ್ತಿವೆ. ಜೊತೆಜೊತೆಗೆ ಪ್ರತಿನಿತ್ಯವೂ ವೃತ್ತಪತ್ರಿಕೆಗಳಲ್ಲಿ ವರದಿಯಾಗುವ ಲಂಚದ ಹಗರಣಗಳು, ಅನೈತಿಕತೆ, ರಾಜಕೀಯ ವಲಯಗಳಲ್ಲಿನ ಅಸೂಯೆ, ದ್ವೇಷಗಳು ಭಾರತದ ಕರಾಳ ಮುಖವನ್ನೇ ಪ್ರತಿಬಿಂಬಿಸುತ್ತಿವೆ. ಅಸಾಧ್ಯವಾಗಿ ಬೆಳೆಯುತ್ತಿರುವ ತಂತ್ರಜ್ಞಾನವು ಹಲವಾರು ಸುಧಾರಣೆಗಳನ್ನು ತಂದಿದ್ದರೂ, ಸಾಮಾನ್ಯ ಭಾರತೀಯನು ಆಶಾದಾಯಕವಾದ ಒಂದೇ ಒಂದು ಕುರುಹನ್ನೂ ಕಾಣದೆ ಬಳಲುತ್ತಿದ್ದಾನೆ. ಧರ್ಮ, ಅರ್ಥ, ಕಾಮ, ಮೋಕ್ಷಗಳು ಪುರುಷಾರ್ಥಗಳು ಎಂದು ಸಾರುವ ನಾವು ಎಲ್ಲವನ್ನೂ ಅಧಾರ್ಮಿಕವಾಗಿ ಸಾಧಿಸಲು ಪ್ರಯತ್ನಿಸುತ್ತಿರುವುದು ಸಾಧುವಲ್ಲ. ಹಿಂದಿನ ಕಾಲದಲ್ಲಿ ರಾಜಮಹಾರಾಜರು ಅಧಾರ್ಮಿಕ ರೀತಿಯಲ್ಲಿ ವರ್ತಿಸಿದಾಗ ಪ್ರಜೆಗಳು ಪ್ರತಿಭಟಿಸುತ್ತಿದ್ದರು ಎಂಬುದು ತಿಳಿದಿರುವ ಸಂಗತಿ. ನಿರ್ಜೀವ ಪ್ರಾಣಿಗಳಂತೆ ಬಂದದ್ದನ್ನೆಲ್ಲ ಸ್ವೀಕರಿಸುವ ತಮೋಗುಣವನ್ನು ಬಿಟ್ಟು ಕಾರ್ಯತತ್ಪರರಾಗಬೇಕೆಂದು ಸ್ವಾಮಿ ವಿವೇಕಾನಂದರು ಕರೆ ನೀಡಿದ್ದಾರೆ. ರಾಷ್ಟ್ರದ ನಿರ್ಮಾಣದಲ್ಲಿ ಎಲ್ಲರೂ ಕಟಿಬದ್ಧರಾಗಿ ಕಾರ್ಯ ನಿರ್ವಹಿಸಿದರೆ ಕತ್ತಲನ್ನೇ ಕಾಣುತ್ತಿರುವ ಜನಸಾಮಾನ್ಯರ ಬದುಕಿನಲ್ಲೂ ಹೊಂಗಿರಣ ಮೂಡಬಹುದು.

ಯಾವುದೇ ರಾಷ್ಟ್ರವು ತನ್ನ ಅಸ್ತಿತ್ವದ ಉದ್ದೇಶವನ್ನೇ ಬಿಟ್ಟುಕೊಟ್ಟು ವಿಕಾಸಗೊಳ್ಳುವುದು ಅಸಾಧ್ಯ. ಭಾರತವು ತನ್ನ ಭವಿತವ್ಯವನ್ನು ಸಾಧಿಸಬೇಕಾದರೆ ಭಾರತವಾಗಿಯೇ ಉಳಿಯಬೇಕು

—ಶ್ರೀ ಅರವಿಂದರು

ಭಾರತವು ಅನೇಕ ಜನಾಂಗಗಳನ್ನು, ಧರ್ಮಗಳನ್ನು, ಆಚಾರ-ವಿಚಾರಗಳನ್ನು ಹೊಂದಿರುವ ದೇಶ. ವಿಭಿನ್ನ ದೇಶಗಳಿಂದ ಸಂಸ್ಕೃತಿಗಳಿಂದ ಬಂದ ಜನರು ಇಲ್ಲಿ ನೆಲೆನಿಂತು ಭಾರತೀಯ ಸಂಸ್ಕೃತಿಯಿಂದ ಪಡೆದುಕೊಂಡು ತಾವೂ ಸಮೃದ್ಧರಾಗಿದ್ದಾರೆ. ಭಾರತೀಯ ಸಂಸ್ಕೃತಿಯೂ ಇತರರಿಂದ ಪಡೆದುಕೊಂಡ ಜ್ಞಾನದಿಂದ, ಭಾಷೆಗಳಿಂದ ಮಧುವಿನಂತೆ ಸುಮಧುರವಾಗಿದೆ. ಈ ವೈಶಿಷ್ಟ್ಯವನ್ನು ಕಾಪಾಡಿಕೊಂಡು, ಪ್ರಗತಿಯೊಂದಿಗೆ ಸಾಮರಸ್ಯ ಹಾಗೂ ಜವಾಬ್ದಾರಿಯುತ ಪ್ರಜ್ಞಾವಂತ ನಾಗರಿಕತೆಯನ್ನು ಸಾಧಿಸುವುದು ನಮ್ಮ ಮುಂದಿರುವ ಕರ್ತವ್ಯ. ಪ್ರಪಂಚದ ಹತ್ತು ಹಲವಾರು ದೇಶಗಳು ಮತೀಯ ಕಲಹಗಳಿಂದ, ಅಮಾನವೀಯ ಸಂಘರ್ಷಗಳಿಂದ ತತ್ತರಿಸುತ್ತಿರುವಾಗ ಭಾರತೀಯರಾದ ನಾವು ಶಾಂತಿಯನ್ನು ಸಾಧಿಸಿ, ಎಲ್ಲೆಡೆ ಅದನ್ನು ಬಿತ್ತರಿಸುವ ಮಹಾ ಕಾರ್ಯದಲ್ಲಿ ತೊಡಗುವಂತಾಗಲಿ. ಧರ್ಮವನ್ನು ಜೀವನದ ತಳಹದಿಯಾಗಿಸಿಕೊಂಡು ಇತರರಿಗೂ ನೀಡುವಂತಾಗಲಿ. ✪

## ಭಾರತೀಯ ಭಾವನೆ

**ಪ್ರಪಂಚದ ಭಾವನಾವಿಕಾಸಕ್ಕೆ ಭಾರತೀಯರ ಪ್ರಭಾವ ಯಾರಿಗೂ ಕಾಣದೆ ಕೇಳದೆ ಬೀಳುವ ಹಿಮಮಣಿಯಂತೆ ಇದೆ. ಆದರೂ ಅದು ಅತಿ ಸುಂದರವಾದ ಗುಲಾಬಿಯನ್ನು ಅರಳುವಂತೆ ಮಾಡುವುದು. ಭಾರತೀಯರ ಪ್ರಭಾವ ಮೌನವಾಗಿದೆ. ಅಗೋಚರವಾಗಿದೆ. ಆದರೂ ಅದ್ಭುತ ಪರಿಣಾಮಕಾರಿಯಾಗಿದೆ; ಇದು ಪ್ರಪಂಚದ ಭಾವನೆಯನ್ನೇ ಕ್ರಾಂತಿಗೊಳಿಸಿದೆ.**

**ಭಾರತೀಯ ಭಾವನೆಯ ಒಂದು ವೈಶಿಷ್ಟ್ಯವೇ ಅದರ ಶಾಂತಿ ಮತ್ತು ಮೌನ.**

**—ಸ್ವಾಮಿ ವಿವೇಕಾನಂದ**